## ಸಾವಿನ ಖಾತ್ರಿ

ರಂಗಣ್ಣನ ಸಾವಿನ ಬಗ್ಗೆ ಅವನ ಹೆಂಡತಿ ಗೌರಮ್ಮನಿಗೆ ನಂಬಿಕೆಯೇ ಬಂದಿರಲಿಲ್ಲ. ಎಷ್ಟು ಹೊತ್ತಾದರೂ ಅಳದೇ ಕೂತಿದ್ದಳು. ಅಷ್ಟರಲ್ಲಿ ಪರಮೇಶಿ ಅಲ್ಲಿಗೆ ಬಂದ. ಅವನನ್ನು ಕಂಡಿದ್ದೇ ಗೌರಮ್ಮನ ದುಃಖದ ಕಟ್ಟೆ ಒಡೆಯಿತು. ಗೌರಮ್ಮನ ಪಕ್ಕದಲ್ಲಿ ಕುಳಿತಿದ್ದ ಪದ್ದಕ್ಕ, 'ಇಷ್ಟು ಹೊತ್ತು ಇಲ್ಲದ ಅಳು ಈಗ ಒಮ್ಮೆಲೇ ಎಲ್ಲಿಂದ ಬಂತೆ?' ಎಂದು ಕೇಳಿದಳು. 'ಸಾಲಕ್ಕೆ ಹೆದರಿ ಸಾಯುವವನಲ್ಲ ನನ್ನ ಗಂಡ ಅಂತ ಸುಮ್ಮನಿದ್ದೆ. ಈಗ ಪರಮೇಶಿಯನ್ನು ನೋಡಿಯೂ ಈತ ಸುಮ್ಮನೇ ಮಲಗಿದ್ದನ್ನು ನೋಡಿದರೆ ಸತ್ತಿರುವುದು ಖಾತ್ರಿ ಆಯ್ತು. ಪರಮೇಶಿಯನ್ನು ದೂರದಲ್ಲಿ ನೋಡಿದರೂ ತಾನು ಮನೆಯಲ್ಲಿಲ್ಲ ಅಂತ ಹೇಳು ಎನ್ನುತ್ತಿದ್ದರು...' ಎಂದು ಹೇಳಿ ಮತ್ತೂ ಜೋರಾಗಿ ಅಳತೊಡಗಿದಳು.

**ಶಂಕರೇಗೌಡ ತುಂಬಕೆರೆ**



---



## ಪ್ರಸಾದ

ಎಂದಿನಂತೆ ಆಫೀಸಿಗೆ ಹೋಗಲು ಅಣಿಯಾಗಿ ಬಂದ ಪಮ್ಮಿ, ತನ್ನ ಸ್ಕೂಟಿಯ ಡಿಕ್ಕಿ ತೆಗೆದು ಬ್ಯಾಗ್ ಇರಿಸಿ ಅದನ್ನು ಗೇಟಿನ ಆಚೆ ತಂದು ನಿಲ್ಲಿಸಿದಳು. ಅಷ್ಟರಲ್ಲಿ ಅವಳ ನಾಲ್ಕು ವರ್ಷದ ಮಗ ಅಜ್ಜನೊಂದಿಗೆ ಗೇಟ್ ಬಳಿ ಬಂದು ನಿಂತ. ನಾಲ್ಕಾರು ಸಲ ಸ್ಟಾರ್ಟ್ ಮಾಡಿದರೂ ಗಾಡಿ ಸ್ಟಾರ್ಟ್ ಆಗಲಿಲ್ಲ. ಕಿಕ್ ಹೊಡೆದು ಗಾಡಿ ಚಾಲೂ ಮಾಡಿ ಗಡಿಯಾರ ನೋಡಿಕೊಂಡ ಪಮ್ಮಿ, 'ಓ ಗಾಡ್, ಲೇಟಾಯ್ತು... ಇದೆ ಇವತ್ತು ನನಗೆ ಮಂಗಳಾರತಿ' ಎಂದು ಗೊಣಗಿದಳು. ಅಲ್ಲೇ ನಿಂತಿದ್ದ ಮಗ, 'ಹಾಗಾದ್ರೆ ಬರುವಾಗ ಪ್ರಸಾದ ತರೋದು ಮರೀಬೇಡ ಮಮ್ಮಿ,' ಅಂದ.

**ಅರವಿಂದ ಜೋಷಿ**